ಎಂ.ವಿ.ಸಿ.ನಂ.582/2017

ಆರ್.ಡಬ್ಲ್ಯೂ:1

ದಿನಾಂಕ : 31.10.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ: ಎದುರುದಾರರ ಪರ ಶ್ರೀ ಟಿ ಎಸ್ ಆರ್ ವಕೀಲರಿಂದ,

ನನ್ನ ಮುಖ್ಯವಿಚಾರಣೆ ಕುರಿತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ, ಅದರಲ್ಲಿ ಬರೆದ ವಿಷಯ ಸತ್ಯವಾಗಿದೆ ಎಂದು ಪ್ರಮಾಣಿಕರಿಸಿ ಸಹಿ ಮಾಡಿರುತ್ತೇನೆ.

ನಾನು ಈ ಕೆಳಕೆಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

| | |
|---|---|
| ನಿಆರ್ಃ1 | ಆಥರೈಜೆಷನ್ ಲೇಟರ್ |
| ನಿಆರ್ಃ 2 | ಪಾಲಿಸಿ ದಾಖಲೆ |
| ನಿಆರ್ಃ3 | ಡ್ರೈವಿಂಗ್ ಲೈಸೆನ್ಸ್ ಎಕ್ಸಟ್ರಾಕ್ಟ್ |

**ಪಾಟೀ ಸವಾಲುಃ** ಅರ್ಜಿದಾರರ ಪರ **ಶ್ರೀ** ಎನ್ ಎಮ್ ಡಿ **ವಕೀಲರಿಂದ,**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಸತ್ಯ ಇರುತ್ತದೆ ನಾನು ಹೇಳಿ ಬರೆಸಿರುತ್ತೇನೆ. 1 ನೇ ಎದುರುದಾರರು ಸಿ.ಸಿ ನಂಬರ್ 523/2017 ರಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ವರದಿಯಲ್ಲಿ ನಾಗರಾಜ.ಜಿ ತಂದೆ ತಿರುಮಲಪ್ಪ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಚಾಲನೆ ಪರವಾನಗಿ ಪತ್ರ ಇಲ್ಲ ಎಂದು ನಮೂದು ಆಗಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ತನ್ನ ಅನುಕೂಲವಾಗುವ ರೀತಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತನಿಖಾಧಿಕಾರಿ ಅಂತಿಮ ವರದಿಯನ್ನು ಹಾಕುವ ಮುಂಚೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ಅಂತಿಮ ವರದಿಯನ್ನು ಹಾಕುತ್ತಾರೆ ಎಂದರೆ ಸರಿ. ನಿಪಿಃ 8 ಮತ್ತು 9 ರಲ್ಲಿ ಚಾಲಕನ ಹೆಸರು ನಾಗರಾಜ ತಂದೆ ಗಿರಿಮಲ್ಲಪ್ಪ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಹೌದು ಅವರು ಅನುಕೂಲವಾಗುವ ರೀತಿಯಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಚಾಲಕನ ಹೆಸರು ತಪ್ಪಾಗಿದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ.

2. ಅಪಘಾತದ ದಿನಾಂಕ ಪಾಲಿಸಿ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ಪಾಲಿಸಿ ಪ್ಯಾಕೇಜ್ ಪಾಲಿಸಿ ಇರುತ್ತದೆ ಎಂದರೆ ಸರಿ. ಪ್ಯಾಕೇಜ್ ಪಾಲಿಸಿಯಲ್ಲಿ third party ಕಡ್ಡಾಯವಾಗಿ ಕವರ್ ಆಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಅರ್ಜಿದಾರರು third party ಇರುತ್ತಾರೆ ಎಂದರೆ ಸರಿ. ಪರಿಹಾರ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರವನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 8 ಮತ್ತು 9 ರಲ್ಲಿ ನಾಗರಾಜ ತಂದೆ ಗಿರಿಮಲ್ಲಪ್ಪ ಎಂದು ಹೇಗೆ ನಮೂದು ಇರುತ್ತದೆಯೊ ಅದೇ ರೀತಿಯಲ್ಲಿ ನಿಆರ್ಃ 3 ರಲ್ಲಿ ನಾಗರಾಜ.ಕೆ ತಂದೆ ಗಿರಿಮಲ್ಲಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ಅರ್ಜಿಯಲ್ಲಿ Nagaraj.G Son of Girimallappa Alias Thirumalappa ಎಂದು ನಮೂದು ಇದೆ ಎಂದರೆ ಸರಿ. ನಾನು ಅರ್ಜಿಯಲ್ಲಿ ಬರೆದಿರುವ ರೀತಿಯನ್ನು ನನ್ನ ಪ್ರತಿವಾದ ಪತ್ರದಲ್ಲಿ defence ಆಗಿ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ಕೇವಲ ಅಂತಿಮ ವರದಿಯಲ್ಲಿ ತಂದೆಯ ಹೆಸರು ಟೈಪಿಕಲ್ ಎರರ್/Typical error ನಿಂದ ತಪ್ಪಾಗಿದ್ದನ್ನು ಹಿಡಿದುಕೊಂಡು ಪರಿಹಾರ ಕೊಡುವ ಬಾಧ್ಯಸ್ಥೆಯನ್ನು ತಪ್ಪಿಸಿಕೊಳ್ಳಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ,**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.